ಪ್ರಶಸ್ತಿಗಳನ್ನೂ ಗಳಿಸಿದ್ದ. ಆತ ಸೌಮ್ಯ ಸ್ವಭಾವದವನಂತೆ ಕಾಣುತ್ತಾನೆ. ಕೊಡವ ಸಮಾಜದ ಕೆಲವು ಕಾರ್ಯಕ್ರಮಗಳಲ್ಲಿ ಆತನನ್ನು ಕಂಡಿದ್ದೆ. ಸಮಾಜ ಸೇವೆಯಲ್ಲಿ ಆತನದು ಎತ್ತಿದ ಕೈ. ಅನೇಕ ಅಸಹಾಯಕರಿಗೆ ಧನ ಸಹಾಯ ಮಾಡಿದ್ದು ಕೇಳಿ ಬಲ್ಲೆ. ಆತನೊಬ್ಬ ಉತ್ತಮ ಮನುಷ್ಯ ಎನ್ನಲಡ್ಡಿಯಿಲ್ಲ. ಅಂತಹವನು, ಈ ವಯಸ್ಸಿನಲ್ಲಿ, ಮದುವೆಯಾಗಿ ಇಪ್ಪತ್ತು ವರ್ಷಗಳ ಅನಂತರ ಕೊಲೆ ಮಾಡಿದ ಎನ್ನುವುದು ನಂಬಲು ಕಷ್ಟವಾಗುತ್ತದೆ."

"ಒಂದು ಪ್ರಮುಖ ವಿಷಯವನ್ನು ನೀವು ಮರೆತಂತಿದೆ. ಮೊದಲಿಗೆ ಈ ಪ್ರಕರಣವು ಬೆಂಕಿಯ ಅವಘಡವೆಂದು ಪರಿಗಣಿಸಲ್ಪಟ್ಟಿತ್ತು. ಆದರೆ, ಮರಣೋತ್ತರ ಪರೀಕ್ಷೆಯಲ್ಲಿ ಆಕೆಯ ತಲೆಗೆ ಬಿದ್ದ ಏಟಿನ ವಿಷಯ ಬಹಿರಂಗವಾಗಿದೆ. ಅದನ್ನು ಚೆಟ್ಟಿಯಪ್ಪ ಏಕೆ ಮೊದಲೇ ಪೊಲೀಸರಿಗೆ ಹೇಳಲಿಲ್ಲ?"

"ಅದೇನೋ ನಿಜ. ಆದರೆ, ಆತ ತನ್ನ ವಕೀಲನಾಗಿ, ನಾಣಯ್ಯ ಅನ್ನುವ ಜೂನಿಯರ್ ವಕೀಲನನ್ನು ನೇಮಿಸಿಕೊಂಡಿದ್ದೇಕೆ? ಆತನ ಉದ್ದೇಶ ನಿಚ್ಚಳ. ಪ್ರಕರಣದಲ್ಲಿ ಗೆಲ್ಲಬೇಕೆಂದು ಆತ ಬಯಸಿದಂತಿಲ್ಲ. ಯಾಕೆ? ಆತ ಕೊಲೆಗಾರನನ್ನು ಬಚಾವ್ ಮಾಡಲು ಯತ್ನಿಸುತ್ತಿದ್ದಾನೆ! ಹಾಗಿದ್ದರೆ, ನಿಜವಾದ ಕೊಲೆಗಾರ ಯಾರು?" ಕಾಶಿ ಪ್ರಶ್ನಿಸಿದರು.

"ನಿಮ್ಮ ಹೇಳಿಕೆಯಂತೆ, ಚೆಟ್ಟಿಯಪ್ಪ ಒಬ್ಬ ನೇರ ನಡೆಯ ವ್ಯಕ್ತಿ. ತಾನೇ ಕೊಲೆ ಮಾಡಿದ್ದರಿಂದ ಅದನ್ನು ವಿರೋಧಿಸಲು ಪ್ರಯತ್ನಿಸುತ್ತಿಲ್ಲ!" ನಾನು ಮಾತು ಸೇರಿಸಿದೆ.

"ಹಾಗಲ್ಲ. ಚೆಟ್ಟಿಯಪ್ಪ ಅಂತಹವನಾಗಿದ್ದರೆ, ಅಸಲಿಗೆ ಕೊಲೆಯೇ ಮಾಡುತ್ತಿರಲಿಲ್ಲ. ಕೊಲೆ ಮಾಡಿದ್ದಲ್ಲಿ, ಆತ ಮೊದಲಿಗೇ ತನ್ನ ತಪ್ಪು ಒಪ್ಪಿಕೊಳ್ಳುತ್ತಿದ್ದ. ನನ್ನ ಎಣಿಕೆಯಂತೆ, ಚೆಟ್ಟಿಯಪ್ಪನಿಗೆ ಕೊಲೆಗಾರ ಯಾರೆಂಬುದು ಗೊತ್ತಿದೆ. ಆತನನ್ನು ಉಳಿಸಲು ಮೌನಕ್ಕೆ ಜಾರಿರಬೇಕು. ನಿಜವಾದ ಕೊಲೆಗಾರನನ್ನು ಪತ್ತೆ ಮಾಡಲು ನಿಮ್ಮ ಸಹಕಾರ ಕೋರಿ ನಾನು ಬಂದಿರೋದು."

"ಸರ್. ಪ್ರಕರಣ ನಡೆದು ಎರಡು ವರುಷ ಕಳೆದಿದೆಯಲ್ಲ."

"ಪ್ರಯತ್ನಿಸೋದರಲ್ಲಿ ತಪ್ಪೇನು? ಒಂದು ಮನವಿ. ನನ್ನ ಗುರುತು ಬಹಿರಂಗವಾಗದಿರಲಿ."

ಈ ರೀತಿಯಲ್ಲಿ ಹಳೆಯ ಕೊಲೆ ಪ್ರಕರಣದ ತನಿಖೆಗೆ ಕಾಶಿಯವರು ಮರು ಜೀವ ನೀಡಿದರು.

★★★

ನಾವು ಬಂದ ಉದ್ದೇಶ ಅರುಹಿದಾಗ, ಪೊಲೀಸ್ ಅಧಿಕಾರಿ ವೆಲೆಂಟೈನ್ ಡಿಸೋಜ ಗಟ್ಟಿಯಾಗಿ ನಕ್ಕ.

"ನೀವು ಬಹಳ ಬೇಗ ಬಂದಿದ್ದೀರಿ. ಪ್ರಕರಣ ಮುಕ್ತಾಯ ಹಂತದಲ್ಲಿದೆ. ಚೆಟ್ಟಿಯಪ್ಪ ಕಂಬಿ ಎಣಿಸೋದಂತೂ ಗ್ಯಾರಂಟಿ!"

"ಗೊತ್ತು, ತಡವಾಗಿದೆ. ಚೆಟ್ಟಿಯಪ್ಪನ ಮಿತ್ರರೊಬ್ಬರಿಗೆ ತಡವಾಗಿ ವಿಷಯ ತಿಳಿದು, ನಮ್ಮಲ್ಲಿಗೆ ಬಂದಿದ್ದಾರೆ."

ನಾವು ಕೊಲೆ ತನಿಖೆಯ ಕಡತದಲ್ಲಿ ಕಣ್ಣಾಡಿಸಿದೆವು. ಚೆಟ್ಟಿಯಪ್ಪನ ಅಡಿಗೆಯಾಳು ಬಟ್ಯನ ಈರಪ್ಪ, ನೆರೆಮನೆಯವರಾದ ಸಣ್ಣ ಜವರಯ್ಯ, ದೊರೆಮಣಿ, ಮನೆಗೆಲಸದ ಸೀತಮ್ಮ, ಮಿಥಿಲಾಳ ಸಹೋದ್ಯೋಗಿಗಳಿಬ್ಬರು, ವೈದ್ಯಾಧಿಕಾರಿ ಸೇರಿದಂತೆ ಸುಮಾರು ಹತ್ತು ಸಾಕ್ಷಿಗಳನ್ನು ಕರೆಸಿ, ವಿಚಾರಣೆ ನಡೆಸಲಾಗಿತ್ತು. ಮಿಥಿಲಾಳ ತಲೆಗೆ ಹೊಡೆಯಲು ಚೆಟ್ಟಿಯಪ್ಪ ಬಳಸಿದ್ದ ಇಟ್ಟಿಗೆಯನ್ನು ಆ ದಿನ ಬೆಳಗ್ಗೆ ತನ್ನ ತೋಟದಿಂದ ತರುವುದನ್ನು ಪಕ್ಕದ ಫ್ಲ್ಯಾಟಿನ ಎರಡನೇ ಮಹಡಿಯಲ್ಲಿದ್ದ ದೊರೆಮಣಿ ಕಂಡಿದ್ದಾಗಿ ಸಾಕ್ಷ್ಯ ನುಡಿದಿದ್ದ. ಆಕೆಯ ಸಾವು ಸಂಜೆ ಸುಮಾರು ಏಳರ ಹೊತ್ತಿಗೆ ಸಂಭವಿಸಿತ್ತು. ಆವತ್ತು ಹನ್ನೆರಡು ಗಂಟೆಗೆ ಬೆಂಗಳೂರಿಗೆಂದು ಚೆಟ್ಟಿಯಪ್ಪ ಹೊರಟವನು ಹಠಾತ್ತಾಗಿ ಹಿಂದಿರುಗಿದ್ದ. ಎರಡೂ ಹತ್ತಕ್ಕೆ ಗೋಣಿಕೊಪ್ಪದ ಹತ್ತಿರದ ಸಿಗ್ನಲಿನಲ್ಲಿ ಆತನ ಕಾರು ಹಾದು ಹೋದದ್ದು